ಅಹಂಕಾರವನ್ನು ಕಳೆದುಕೊಳ್ಳುತ್ತಾ, ಅಹಂಕಾರಕ್ಕೆ ಕಾರಣವೇ ಇಲ್ಲ ಎನ್ನುವ ಜ್ಞಾನೋದಯದ ಕಡೆಗಿನ ಮಹಾಪ್ರಯಾಣ ಇದು. ನನಗಂತೂ ಸ್ತ್ರೀವಾದ ಅನ್ನೋದು ಪ್ರಕೃತಿ ಮೀಮಾಂಸೆ ಅಂತಲೇ ಯಾವಾಗಲೂ ಅನ್ನಿಸುತ್ತೆ. ಪರಸ್ಪರರನ್ನ ಪೊರೆಯುವ, ಪೋಷಿಸುವ, ಈ ಮೂಲಕ ಬಹುಶಃ ಮೊದಲ ಬಾರಿಗೆ ಇಡಿಯಾಗಿ ಇನ್‌ಕ್ಲೂಸಿವ್ ಅಂತ ಕರೆಯಬಹುದಾದ ಒಂದು ಜೀವನ ಮೀಮಾಂಸೆ ಇದು

**ವೀಣಾ:** ನಿಮ್ಮ ಈ ನಿಲುವಿನ ಜೊತೆ ನನಗೆ ಸಹಮತವಿದೆ.

**ಆಶಾ:** ನವ್ಯ ಬರವಣಿಗೆಯ ಬಹುಮುಖ್ಯ ಲೇಖಕಿಯರಲ್ಲಿ ಒಬ್ಬರು ನೀವು. ನವ್ಯ ಸಾಹಿತ್ಯದ ಧೋರಣೆಗಳು, ಆಶಯಗಳ ಜೊತೆ ನೀವು ಕಟ್ಟಿಕೊಂಡ ಸಂಬಂಧ ಎಂಥದ್ದು?

**ವೀಣಾ:** ಕನ್ನಡದಲ್ಲಿ ನವ್ಯ ಸಾಹಿತ್ಯ ಒಂದು ಬಿರುಗಾಳಿಯಂತೆ ಬೀಸಿ ಬಂದಿತು. ಅರವತ್ತು ಎಪ್ಪತ್ತರ ದಶಕಗಳಲ್ಲಿ ನವ್ಯ ಸಾಹಿತ್ಯದ ಆಶಯಗಳು–ಧೋರಣೆಯ ಬಗ್ಗೆ ಎಲ್ಲೆಂದರಲ್ಲಿ ವಿಚಾರ ಸಂಕಿರಣಗಳು, ಗೋಷ್ಠಿಗಳು, ಉಪನ್ಯಾಸಗಳು ನಡೆಯುತ್ತಿದ್ದವು. ಕಾಮೂ, ಸಾರ್ತ್ರ್, ಬೆಕೆಟ್, ಲೋಹಿಯಾ, ಗೋಪಾಲಗೌಡರು, ಅಡಿಗರು ಇವರೆಲ್ಲರ ತತ್ವಗಳ ಬಗ್ಗೆ ಆಗ ಯುವಜನರು ಗಂಭೀರವಾಗಿ ಚರ್ಚಿಸಿದ್ದೇ ಚರ್ಚಿಸಿದ್ದು. ಸ್ವಾತಂತ್ರ್ಯೋತ್ತರ ಭಾರತದ ವಾಸ್ತವದ ನೆಲೆಗಳನ್ನು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಶೋಧಿಸುವ ಪ್ರಯತ್ನ ನವ್ಯ ಸಾಹಿತ್ಯದ ಮುಖ್ಯ ಗುಣ ಲಕ್ಷಣಗಳಲ್ಲೊಂದಾಗಿತ್ತು. ಜೊತೆಗೆ ಮನುಷ್ಯ ವ್ಯಕ್ತಿತ್ವದ ಆಳದಲ್ಲಿ ನಡೆಯುವ ಮಾನಸಿಕ ತಾಕಲಾಟಗಳನ್ನು, ಆಂತರಿಕ ದ್ವಂದ್ವಗಳನ್ನು ವಿಶ್ಲೇಷಿಸುವ ಪ್ರಯತ್ನವೂ ಅಷ್ಟೇ ಮುಖ್ಯವಾಗಿತ್ತು. ಹಾಗೆ ನೋಡಿದರೆ 'ನವ್ಯತೆ'ಯೆಂಬ ಅಂಶ ಪ್ರತಿ ಸಾಹಿತ್ಯ ಘಟ್ಟದಲ್ಲೂ ಇದ್ದೇ ಇರುತ್ತದೆ.

ಆದರೆ ನಾನು ಎಂದೂ ನವ್ಯ ಸಾಹಿತ್ಯದ ಆಶಯಗಳನ್ನಾಗಲೀ ಧೋರಣೆಯನ್ನಾಗಲೀ ಎತ್ತಿ ಹಿಡಿಯುವ ಉದ್ದೇಶದಿಂದ ಬರೆಯಲಿಲ್ಲ. ನನಗೆ ಪ್ರಾಮಾಣಿಕವಾಗಿ ಅನ್ನಿಸಿದ್ದನ್ನು ಬರೆದೆ ಅಷ್ಟೇ. ನನ್ನ ದೃಷ್ಟಿಕೋನಗಳು ನವ್ಯದ ಆಶಯಗಳಿಗೆ ಹೊಂದಿಕೊಂಡಂತೆ ಕಾಣಿಸುತ್ತವೆ ಅಂತಾದರೆ ಅದು ಆ ಕಾಲಘಟ್ಟದ ಅಭಿವ್ಯಕ್ತಿ ಕ್ರಮದ ಹೊಸತನದ ಪ್ರಭಾವ ಎಂದು ಕರೆಯಬಹುದೇನೋ.

**ಆಶಾ:** ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹೆಣ್ಣನ್ನ ಕಂಡಿರುವ ಕ್ರಮದ ಬಗ್ಗೆ ನಿಮಗೆ ಏನನ್ನಿಸುತ್ತದೆ?

**ವೀಣಾ:** ಸ್ಥೂಲವಾಗಿ ಹೇಳೋದಾದರೆ, ಸ್ವಾತಂತ್ರ್ಯಪೂರ್ವ ಕಾಲದಲ್ಲಿ, ನವೋದಯ ಕಾಲದಲ್ಲಿ, ಹೆಚ್ಚಾಗಿ ಹೆಣ್ಣಿನ ಮೇಲೆ ಪರಂಪರೆಯ, ಆದರ್ಶಗಳ ಭಾರ ಹೊರೆಸಿ ಆಕೆಯನ್ನು 'ದೇವಿ'ಯಂತೆ ಚಿತ್ರಿಸುವ ಪರಿಪಾಠವಿತ್ತು. 'ದೇವಿ'ಯಾಗದ ಹೆಣ್ಣು ರಾಕ್ಷಸಿಯೇ ಆಗಿರುತ್ತಿದ್ದಳು. ಕಪ್ಪು ಅಥವಾ ಬಿಳುಪು. ಅಲ್ಲೊಂದು ಇಲ್ಲೊಂದು ಸ್ತ್ರೀಪಾತ್ರ ಅನ್ಯಾಯವನ್ನು ಪ್ರತಿಭಟಿಸಿದರೂ ಅದು ಬಹಳ ಸೌಮ್ಯರೂಪದ ಪ್ರತಿಭಟನೆ ಆಗಿರುತ್ತಿತ್ತು. ಇನ್ನು ನವ್ಯ ಸಾಹಿತಿಗಳು ತಮ್ಮ ಸ್ವಂತ ಅಸ್ತಿತ್ವ, ವ್ಯಕ್ತಿ ಸ್ವಾತಂತ್ರ್ಯ, ಆಂತರಿಕ ತೊಳಲಾಟ, ತಮ್ಮ ಉತ್ಕಟ ಸಂವೇದನೆಗಳು ಇತ್ಯಾದಿಗಳ ಬಗ್ಗೆ ಸಾಕಷ್ಟು ಬರೆದಿದ್ದರೂ, ರೂಢಿಗತ ಸಂಪ್ರದಾಯಗಳು ಮತ್ತು ನೈತಿಕತೆ ಬಗ್ಗೆ ಸಾಕಷ್ಟು ಪ್ರತಿಭಟಿಸಿದ್ದರೂ, ಇವರು ಯಾರೂ ಮಹಿಳೆಯ ಅಸ್ತಿತ್ವ, ದ್ವಂದ್ವ–ಸಮಸ್ಯೆ–ತೊಳಲಾಟ ಮೊದಲಾದವುಗಳ ಬಗ್ಗೆ ಗಂಭೀರವಾಗಿ ಯೋಚಿಸಲಿಲ್ಲ ಅನ್ನುವುದೇ ಸತ್ಯ. ಸ್ತ್ರೀವಾದ ಮತ್ತು ದಲಿತ ಬಂಡಾಯ ಚಳವಳಿಗಳ ಕಾಲದಲ್ಲಿ ಮಾತ್ರ ಹೆಣ್ಣನ್ನು ಗಂಡಿನಂತೆಯೇ ಒಬ್ಬ ಮನುಷ್ಯಳು ಎಂದು ಪರಿಗಣಿಸಲಾಯಿತು. ಆಧುನಿಕೋತ್ತರ ಸಾಹಿತ್ಯದಲ್ಲಿ ಹೆಣ್ಣು ಸ್ಥಾಪಿತ ಮೌಲ್ಯಗಳನ್ನು ಧಿಕ್ಕರಿಸಬಲ್ಲವಳಷ್ಟೇ ಅಲ್ಲ, ಹೊಸ ಮೌಲ್ಯಗಳನ್ನು ಸೃಷ್ಟಿಸಲೂ ಸಮರ್ಥಳಾಗಿದ್ದಾಳೆ. ಹೀಗೆ ಕನ್ನಡ